ಓ.ಎಸ್. ಸಂಖ್ಯೆ ಃ 52/2012

ದಿನಾಂಕ ಃ 31/08/2018
ಪಿ. ಡಬ್ಲ್ಯೂ. ಃ 3

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>

<u>ಮಧ್ಯಂತರ ಅರ್ಜಿಯ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಶ್ರೀ. ವಿ. ಎಮ್. ಅವರಿಂದ.</u>

16. ನಮ್ಮ ತಂದೆ ಮತ್ತು ಬಂಡೆಪ್ಪ ಸ್ನೇಹಿತರು ಇದ್ದರು. ಬಂಡೆಪ್ಪ ಅವರಿಗೆ ಏನೂ ಆದಾಯ ಇತ್ತು ಮತ್ತು ಯಾವ ಯಾವ ಆಸ್ತಿ ಖರೀದಿಸಿದ್ದರು ಮತ್ತು ಮಾರಾಟ ಮಾಡಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಗೊತ್ತಿಲ್ಲ. ಬಂಡೆಪ್ಪ, ಸಂಬಾಜಿ ಮತ್ತು ಗಣಪತಿ ಜೀವಂತ ಇದ್ದಾಗ ಯಾವತ್ತೂ ದಾವಾ ಆಸ್ತಿಯ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿಲ್ಲ ಅಂದರೆ ನಿಜ. ಬಂಡೆಪ್ಪ, ಸಂಬಾಜಿ ಮತ್ತು ಗಣಪತಿ ತೀರಿಕೊಂಡ ನಂತರ ಈ ದಾವೆ ಸಲ್ಲಿಸುವ ವರೆಗೆ ದಾವಾ ಆಸ್ತಿಯ ಬಗ್ಗೆ ನನಗೆ ಗೊತ್ತಿರಲಿಲ್ಲ ಅಂದರೆ ಸರಿಯಲ್ಲ. ನಾನು ಇವತ್ತಿನವರೆಗೆ ಸ್ಥಳಕ್ಕೆ ಹೋಗಿ ದಾವಾ ಆಸ್ತಿಯನ್ನು ನೋಡಿಲ್ಲ ಅಂದರೆ ಸುಳ್ಳು. ಅದನ್ನು ಸುಮಾರು 50 ವರ್ಷದ ಹಿಂದೆ ನೋಡಿದ್ದೆ. ದಾವಾ ಆಸ್ತಿಯನ್ನು ಯಾರು ಕಾಸ್ತ ಮಾಡುತ್ತಿದ್ದರು ಮತ್ತು ಮಾಲೀಕರಾಗಿ ಆಗಲಿ ಅಥವಾ ಗೇಣಿದಾರರಾಗಿ ಕಾಸ್ತ ಮಾಡುತ್ತಿದ್ದರಾ ಎಂದು ಮಾಹಿತಿ ಇಲ್ಲ ಅಂದರೆ, ಬಂಡೆಪ್ಪ ಅವರು ಕಾಸ್ತ ಮಾಡುತ್ತಿದ್ದನ್ನು ನೋಡಿದ್ದೇನೆ. ಆದರೆ ಅವರು ಮಾಲೀಕರಾಗಿ ಆಗಲಿ ಅಥವಾ ಗೇಣಿದಾರರಾಗಿ ಕಾಸ್ತ ಮಾಡುತ್ತಿದ್ದರಾ ಅಂತಾ ಗೊತ್ತಿಲ್ಲ. ನಾನು ವಾದಿಯಿಂದ ಮಾಹಿತಿ ತೆಗೆದುಕೊಂಡು ಆ ಪ್ರಕಾರ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಭಂದಿಸಿದ ಕಾಗದ ಪತ್ರವನ್ನು ವಾದಿ ತೋರಿಸಿರುವುದಿಲ್ಲ ಮತ್ತು ಅದನ್ನು ಬೇರೆ ಸಂಧರ್ಭದಲ್ಲಿ ನೋಡಿರುವುದಿಲ್ಲ. ವಾದಿ ಆಗಲಿ ಅಥ್ವ ಅವರ ತಂದೆ ಆಗಲಿ ಸ್ವತಃ ಖುದ್ದಾಗಿ ದಾವಾ

ಅಸ್ತಿಯನ್ನು ಕಾಸ್ತ ಮಾಡಿರುವುದನ್ನು ನೋಡಿಲ್ಲ, ಆದರೆ ಅವರು ಆಗಾಗ ಬಂದು ದಾವಾ ಆಸ್ತಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಅವರು ಜಮೀನಿಗೆ ಬಂದದ್ದನ್ನು ನಾನು ಕಣ್ಣಾರೆ ನೋಡಿಲ್ಲ ಅಂದರೆ ಸುಳ್ಳು. ಬಂಡೆಪ್ಪ ಆಗಲಿ, ಸಂಬಾಜಿ ಆಗಲಿ ಅಥವಾ ವಾದಿ ಆಗಲಿ ಯಾವತ್ತೂ ದಾವಾ ಆಸ್ತಿಯ ಕಾಸ್ತ ಮಾಡಿಲ್ಲ ಅಂದರೆ ಸುಳ್ಳು. ಸಂಬಾಜಿ ಆಗಲಿ ಅಥವಾ ವಾದಿ ಆಗಲಿ ಯಾವತ್ತೂ ಬೀದರಗೆ ಬಂದು ದಾವಾ ಆಸ್ತಿಯನ್ನು ನೋಡಿಲ್ಲ ಅಂದರೆ ಸುಳ್ಳು. ನಾನು ಮುಖ್ಯ ವಿಚಾರಣೆಯಲಿ ಹೇಳಿರುವ ವಿಚಾರದ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಅಂದರೆ ಸುಳ್ಳು. ವಾದಿ ಹೇಳಿರುವ ಪ್ರಕಾರ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಅಂದರೆ ಸುಳ್ಳು. ಸಾಕ್ಷಿಯು ಸ್ವತಃ ಮುಂದುವರೆದು ಬಂಡೆಪ್ಪ ಒಬ್ಬರು ಮುಸ್ಲಿಂರ ಜಮೀನನ್ನು ಕಾಸ್ತ ಮಾಡುತ್ತಿದ್ದರು ಅದನ್ನು ಗಣಪತಿ, ಸಂಬಾಜಿ ಮಾಡಿಕೊಂಡು ಬಂದಿರುತ್ತಾರೆ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ ಹೆ ಕೆ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಜಡ್ಜ ಮತ್ತು ಸಿ.ಜೆ.ಎಮ್,
ಬೀದರ.